ದಿನಾಂಕಃ14-07-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ಮಾಡಿಸಲಾಯಿತು. ಮುಂದುವರೆದ ಮುಖ್ಯ ವಿಚಾರಣೆ ಅರ್ಜಿದಾರರ ಪರ ವಕೀಲರಿಂದ ಇರುವುದಿಲ್ಲ.

ಪಾಟೀ ಸವಾಲು - ಶ್ರೀ. ಕೆ.ಹೆಚ್ ಆರ್ ವಕೀಲರಿಂದ 1 ಮತ್ತು 2 ನೇ ಎದರುದಾರರ ಪರ

ನಾನು ಅಪಘಾತವನ್ನು ನೋಡಿರುವುದಿಲ್ಲ. ಅಪಘಾತ ಯಾರ ತಪ್ಪಿನಿಂದ ಆಗಿರುತ್ತದೆ ಮತ್ತು ಹೇಗೆ ಅಗಿರುತ್ತದೆ ಎನ್ನುವ ಬಗ್ಗೆ ನನಗೆ ಖುದ್ದು ಮಾಹಿತಿ ಇಲ್ಲ ಸಾಕ್ಷಿ ಮುಂದುವರಿದು ಅಪಘಾತ ವನ್ನು ನೋಡಿರುವ ವ್ಯಕ್ತಿಗಳು ನನಗೆ ಮಾಹಿತಿಯನ್ನು ತಿಳಿಸಿರುತ್ತಾರೆ ಎಂದು ಹೇಳುತ್ತಾರೆ. ಅಪಘಾತವು ಒಂದನೇ ಎದುರುದಾರರ ನಿರ್ಲಕ್ಷತನದಿಂದ ಆಗಿರುವುದಿಲ್ಲ ಎಂದರೆ ಸುಳ್ಳು.

ಅಪಘಾತದ ಸಮಯದಲ್ಲಿ ನನ್ನ ಮಗ ದ್ವಿಚಕ್ರ ವಾಹನ ಚಲಾಯಿಸುತ್ತಿದ್ದರು ಎಂದರೆ ಸರಿಯಲ್ಲ. ಅಪಘಾತದ ಸಮಯದಲ್ಲಿ ಬೈಕನ್ನು ಭರತ್ ಚಾಲನೆ ಮಾಡುತ್ತಿದ್ದರು. ನನ್ನ ಮಗನಿಗೆ ಅಪಘಾತದ ಸಮಯದಲ್ಲಿ 17 ವರ್ಷವಾಗಿತ್ತು. ಬೈಕನ್ನು ಚಲಾಯಿಸುತ್ತಿದ್ದ ವ್ಯಕ್ತಿಗೆ ಯಾವುದೇ ಚಾಲನಾ ಪರವಾನಗಿ ಇರಲಿಲ್ಲ ಎಂದರೆ ನನಗೆ ಗೊತ್ತಿರುವುದಿಲ್ಲ. ಅಪಘಾತದ ಸಮಯದಲ್ಲಿ ಬೈಕನ್ನು ನನ್ನ ಮಗ ಚಲಾಯಿಸುತ್ತಿದ್ದ ಎಂದರೆ ಸರಿಯಲ್ಲ. ಅಪಘಾತವು ನನ್ನ ಮಗನ ತಪ್ಪಿಂದ ಆಗಿರುತ್ತದೆ ಎಂದರೆ ಸರಿಯಲ್ಲ. ಅಪಘಾತಪಡಿಸಿದ ಕಾರಿನ ಚಾಲಕನಿಗೆ ಚಾಲನಾ ಪರವನಾಗಿ ಇತ್ತು ಮತ್ತು ಅಪಘಾತದ ಸಮಯದಲ್ಲಿ ಸದರಿ ಕಾರಿಗೆ ವಿಮೆ ಇತ್ತು ಎಂದರೆ ಸರಿ. ನಾನು ಪರಿಹಾರವನ್ನು ಪಡೆಯಲು ಅರ್ಹರಾಗಿರವುದಿಲ್ಲ ಎಂದರೆ ಸರಿಯಲ್ಲ.

3 ನೇ ಎದುರುದಾರರ ಏಕಪಕ್ಷೀಯವಾದ ಕಾರಣ ಪಾಟೀ ಸವಾಲು ಇಲ್ಲ ಎಂದು ಪರಿಗಣಿಸಾಯಿತು.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಗಣಕೀಕರಣಗೊಳಿಸಲಾಯಿತು)

ಪ್ರಧಾನ ಹಿರಿಯ ವ್ಯವಹಾರ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ ದಂಡಾಧಿಕಾರಿಗಳು, ಸಾಗರ